ಪಡೆದ ನಂತರ ಆಧುನೀಕರಣ ಕಾಮಗಾರಿಗಳನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದು.

ಇ) ನಾಲೆಗಳ ಕೊನೆ ಭಾಗದ ರೈತರಿಗೆ ನೀರಿನ ಕೊರತೆಯಾಗದಂತೆ ನಾಲೆಯಲ್ಲಿ ನಿಗಧಿತ ನೀರಿನ ಹರಿಯುವಿಕೆ ಕಾಯ್ದುಕೊಳ್ಳುವ ಸಲುವಾಗಿ ತುಂಗಾ ನಾಲೆಗಳ ಆಧುನೀಕರಣವನ್ನು ₹ 309.00 ಕೋಟಿ ಮೊತ್ತದ ಅಂದಾಜಿನಡಿಯಲ್ಲಿ ಜಾರಿಗೊಳಿಸಲು ಯೋಜಿಸಲಾಗಿದೆ.

ಈ) ತುಂಗಾ ಎಡದಂಡೆ ನಾಲೆಯಡಿ ಹೊನ್ನಾಳಿ ತಾಲ್ಲೂಕಿನ ವ್ಯಾಪ್ತಿಯ ಅಚ್ಚುಕಟ್ಟು ಪ್ರದೇಶಕ್ಕೆ ಮುಂಗಾರು ಹಂಗಾಮಿನಲ್ಲಿ ಮಾತ್ರ ನೀರಾವರಿಗಾಗಿ ನೀರನ್ನು ಹರಿಬಿಡಲಾಗುತ್ತದೆ. ನೀರನ್ನು ಒದಗಿಸುವ ಘೋಷಿತ ಅಚ್ಚುಕಟ್ಟು ಪ್ರದೇಶಕ್ಕೆ ಮಾತ್ರ ನೀರಿನ ಕರವನ್ನು ವಿಧಿಸಲಾಗುತ್ತಿದೆ. ನೀರಿನ ಕೊರತೆಯಾಗದಂತೆ ಮತ್ತು ಬೆಳೆ ನಷ್ಟವಾಗದಂತೆ ಕ್ರಮ ವಹಿಸಿ ನೀರನ್ನು ಒದಗಿಸಲಾಗುತ್ತಿದೆ.

ಉ) ನಾಲಾ ಆಧುನೀಕರಣಕ್ಕೆ ಸಂಬಂಧಿಸಿದಂತೆ ಈಗಾಗಲೇ ಸರ್ಕಾರದಿಂದ ಸೂಕ್ತ ಕ್ರಮಗಳನ್ನು ಕೈಗೊಂಡಿದ್ದು, ಕೇಂದ್ರ ಜಲ ಆಯೋಗದ ತೀರುವಳಿ ಪಡೆದು ಟೆಂಡರ್ ಪ್ರಕ್ರಿಯೆ ಜಾರಿಗೊಳಿಸಿ ಕಾಮಗಾರಿ ಅನುಷ್ಠಾನಗೊಳಿಸಲಾಗುವುದು.

ಸರ್ವೇಯರ್‌ಗಳ ಕೊರತೆ

422(673); ಶ್ರೀ ಶಾಂತನಗೌಡ ಡಿ.ಜಿ. (ಹೊನ್ನಾಳಿ)

ಅ) ಹೊನ್ನಾಳಿ ತಾಲ್ಲೂಕಿನಲ್ಲಿ ಸರ್ವೇಯರ್‌ಗಳ ಕೊರತೆಯಿಂದ ರೈತರ ಜಮೀನುಗಳ ಕೆಲಸಗಳಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:

ಆ) ಸರ್ವೇಯರ್‌ಗಳ ಕೊರತೆ ನೀಗಿಸಲು ಸರ್ಕಾರ ವಿಳಂಬ ನೀತಿ ಅನುಸರಿಸುತ್ತಿದೆಯೇ:

ಇ) ಸ್ಕೆಚ್ ಹದ್ದುಬಸ್ತು ಮತ್ತಿತರ ಕೆಲಸಗಳು ಸಕಾಲದಲ್ಲಿ ನಡೆಯದಿರುವುದರಿಂದ ರೈತರಿಗೆ ತೊಂದರೆಯಾಗಿದ್ದರೂ ಸರ್ಕಾರ ನಿರ್ಲಕ್ಷ್ಯವಹಿಸುತ್ತಿರುವುದೇಕೆ:

ಈ) ಹೊನ್ನಾಳಿ ತಾಲ್ಲೂಕಿನಲ್ಲಿ ಈ ಕೆಲಸಗಳಿಗಾಗಿ ಅರ್ಜಿ ಸಲ್ಲಿಸಿರುವ ರೈತರುಗಳೆಷ್ಟು; ಇದರಲ್ಲಿ ಎಷ್ಟು ಅರ್ಜಿಗಳನ್ನು ವಿಲೇವಾರಿ ಮಾಡಲಾಗಿದೆ ಬಾಕಿ ಇರುವ ಅರ್ಜಿಗಳೆಷ್ಟು (ಕಳೆದ 3 ವರ್ಷಗಳ ವಿವರ ಒದಗಿಸುವುದು):

ಉ) ತಾಲ್ಲೂಕಿನಲ್ಲಿ ಇರುವ ಸರ್ವೇಯರ್‌ಗಳ ಹುದ್ದೆಗಳೆಷ್ಟು; ಖಾಲಿ ಇರುವ ಹುದ್ದೆಗಳೆಷ್ಟು; (ವಿವರ ನೀಡುವುದು)?

ಶ್ರೀ ವಿ. ಶ್ರೀ ಶ್ರೀನಿವಾಸ ಪ್ರಸಾದ್ (ಮಾನ್ಯ ಕಂದಾಯ ಸಚಿವರು)

ಅ) ಬಂದಿದೆ

ಆ) ಹೊಸದಾಗಿ ನೇಮಕಗೊಂಡು ವೃತ್ತಿ ಬುನಾದಿ ತರಬೇತಿ ಪೂರ್ಣಗೊಳಿಸಿರುವ 1613 ಭೂಮಾಪಕ ಶಿಕ್ಷಣಾರ್ಥಿಗಳನ್ನು ಸೇವಾ ನಿರತ ತರಬೇತಿಗಾಗಿ ವಿವಿಧ ತಾಲ್ಲೂಕು ಕಛೇರಿಗಳಿಗೆ ನಿಯೋಜಿಸಲಾಗಿದೆ. ಸದರಿ ತರಬೇತಿಯು ಜುಲೈ 2014 ರ ಅಂತ್ಯಕ್ಕೆ ಪೂರ್ಣಗೊಳ್ಳಲಿದ್ದು. ತರಬೇತಿ ಪೂರ್ಣಗೊಂಡ ನಂತರ ಹುದ್ದೆಗಳನ್ನು ತಾಲ್ಲೂಕುವಾರು ಹಂಚಿಕೆ ಮಾಡಿ. ಭೂಮಾಪಕರುಗಳನ್ನು ನೇಮಿಸಲಾಗುವುದು.

ಇ) ಭೂಮಾಪಕರ ಕೊರತೆಯಿಂದಾಗಿ ಸ್ವಲ್ಪ ವಿಳಂಬವಾಗಿದ್ದು. ಈಗ ಸರ್ಕಾರವು ಭೂಮಾಪಕರ ನೇಮಕಾತಿ ಮಾಡಿರುವುದರಿಂದ. ಸಕಾಲದಲ್ಲಿ ಬಾಕಿ ಇರುವ ಎಲ್ಲಾ ಕಡತಗಳನ್ನು ಅಳತೆಯಿಂದ ವಿಲೇವಾರಿ ಮಾಡಲಾಗುವುದು.

ಈ) ಕಳೆದ ಮೂರು ವರ್ಷಗಳಲ್ಲಿ ಸ್ವೀಕೃತಿ. ವಿಲೆ ಮತ್ತು ಬಾಕಿ ಪ್ರಕರಣಗಳ ಸಂಖ್ಯೆ.

ಪ್ರಾರಂಭ ಶಿಲ್ಕು	ಸ್ವೀಕೃತಿ	ಒಟ್ಟು	ವಿಲೆ	ಬಾಕಿ
2750	13161	15911	11835	4076

ಊ)

ಹುದ್ದೆಗಳ	ಮಂಜೂರಾದ ಹುದ್ದೆಗಳು	ಭರ್ತಿಯಾದ ಹುದ್ದೆಗಳು	ಖಾಲಿ ಹುದ್ದೆಗಳು
ತಪಾಸಕರು	2	0	2
ಭೂಮಾಪಕರು	13	9	4

ನ್ಯಾಮತಿ ತಾಲ್ಲೂಕು ರಚನೆ

423 (674); ಶ್ರೀ ಶಾಂತನಗೌಡ ಡಿ.ಜಿ. (ಹೊನ್ನಾಳಿ)

ಅ) ಹೊನ್ನಾಳಿ ತಾಲ್ಲೂಕಿನ ನ್ಯಾಮತಿಯನ್ನು ಹೊಸ ತಾಲ್ಲೂಕ್ಕಾಗಿಸಿ ರಚನೆ ಮಾಡುವ ಉದ್ದೇಶ ಸರ್ಕಾರದ ಮುಂದಿದೆಯೇ:

ಆ) ನ್ಯಾಮತಿಯನ್ನು ತಾಲ್ಲೂಕು ಮಾಡುವಂತೆ ಹಿಂದಿನ ಜಿಲ್ಲಾ ಪುನರ್ ವಿಂಗಡಣಾ ಸಮಿತಿಗಳು ಶಿಫಾರಸ್ಸು ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:

ಇ) 2013–14ನೇ ಸಾಲಿನ ಆಯವ್ಯಯದಲ್ಲಿ ನ್ಯಾಮತಿ ತಾಲ್ಲೂಕು ರಚನೆಗೆ ಅವಕಾಶ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ, ಈ ಕುರಿತು ಸರ್ಕಾರ ಯಾವ ಕ್ರಮ ಕೈಗೊಂಡಿದೆ?